<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.109/2022</u>

ದಿಃ 05.10.2024

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-3 Pw-5

| | | |
|---|---|---|
| ಹೆಸರು | ಃ | ಮೂರ್ತಿ |
| ತಂದೆಯ ಹೆಸರು | ಃ | ಸಿ. ಶ್ರೀನಿವಾಸ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಕರಡಿಗೌಡನದೊಡ್ಡಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಸಾಕ್ಷಿದಾರರು 2 ಮಹಜರ್ ಮತ್ತು ಅವುಗಳಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.3, 4, 3(ಸಿ) ಮತ್ತು 4(ಸಿ) ಎಂದು ಗುರುತಿಸಲಾಯಿತು.

2. ಈ ಸಹಿಯನ್ನು ಸುಮಾರು 2 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿದ್ದೆ, ಯಾವುದಕ್ಕೆಂದು ಮಾಹಿತಿ ಇಲ್ಲ.

3. ಯಾವುದೇ ಮೃತ ದೇಹ ನೋಡಿಲ್ಲ.

4. ನನ್ನ ಸಮಕ್ಷಮ ದಫನ್ ಮಾಡಿದ ಮೃತ ದೇಹವನ್ನು ಹೊರ ತೆಗೆದು ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಸ್ಥಳಕ್ಕೆ

ಕರೆದುಕೊಂಡು ಹೋಗಿ ರಾಮಕೃಷ್ಣಪ್ಪರವರ ತೋಟದ ಮನೆಯಲ್ಲಿ ಮಹಜರ್ ಮಾಡಿ, ಮಚ್ಚು ಮತ್ತು ಗೋಡೆಗೆ ಅಂಟಿದ ರಕ್ತ ಮಿಶ್ರಿತ ಬಣ್ಣ ಅಮಾನತ್ತು ಪಡಿಸಿಕೊಂಡಿಲ್ಲ.

4. ನಾನು ಠಾಣೆಯಲ್ಲಿ ಸಹಿ ಮಾಡುವಾಗ ಈ ಆರೋಪಿಗಳ ಪೈಕಿ ಯಾರು ಇರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

5. ದಿಃ29.05.2016 ರಂದು ಮದ್ಯಾಹ್ನ 12 ಗಂಟೆಯಿಂದ 2 ಗಂಟೆವರೆಗೆ ನನ್ನ, ಕುಮಾರ ಮತ್ತು ಪ್ರಕಾಶರವರ ಸಮಕ್ಷಮ, ತಹಶೀಲ್ದಾರ್‌ರವರ ನಿರ್ದೇಶನದ ಮೇರೆಗೆ ರಾಮಕೃಷ್ಣಪ್ಪರವರ ತೋಟದಲ್ಲಿ ಹೂತಿದ್ದ ಮಂಜುಳರವರ ಮೃತ ದೇಹವನ್ನು ಹೊರತೆಗೆದು, ಶವ ಪಂಚನಾಮೆ ಜರುಗಿಸಿ ಸ್ಥಳದಲ್ಲಿಯೇ ನಮ್ಮ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ.

6. ದಿಃ29.05.2016 ರಂದು ಮಧ್ಯಾಹ್ನ 2.15 ರಿಂದ 3.15 ಗಂಟೆವರೆಗೆ ನನ್ನ, ಕುಮಾರ ಮತ್ತು ಪ್ರಕಾಶರವರ ಸಮಕ್ಷಮ, ರಾಮಕೃಷ್ಣಪ್ಪರವರ ತೋಟದ ಮನೆಯಲ್ಲಿ 1 ಮತ್ತು 3 ನೇ

ಆರೋಪಿಗಳು ಕೊಲೆ ಮಾಡಿದ ಸ್ಥಳವನ್ನು ತೋರಿಸಿದರು, ಆ ಸಮಯದಲ್ಲಿ ತನಿಖಾಧಿಕಾರಿ ಗೋಡೆಗೆ ಅಂಟಿದ್ದ ರಕ್ತ ಕಲೆಯುಳ್ಳ ಬಣ್ಣವನ್ನು ಹಾಗೂ ಮಾದರಿ ಬಣ್ಣವನ್ನು ಸಂಗ್ರಹಿಸಿ ಪ್ರತ್ಯೇಕ ಕವರ್‌ನಲ್ಲಿ ಹಾಕಿ ಮೊಹರು ಮಾಡಿದರು ಹಾಗೂ 3ನೇ ಆರೋಪಿ ರಾಣಿ ಕೃತ್ಯಕ್ಕೆ ಉಪಯೋಗಿಸಿದ್ದು ಎಂದು ಹಾಜರು ಪಡಿಸಿದ ಒಂದೂವರೆ ಅಡಿ ಉದ್ದದ ಕೊಳವೆ ಮಚ್ಚನ್ನು ಹಾಜರು ಪಡಿಸಿದರು, ಅದನ್ನು ಪೊಲೀಸರು ಬಿಳಿ ಬಟ್ಟೆ ಚೀಲಕ್ಕೆ ಹಾಕಿ 'ಹೆಚ್' ಅಕ್ಷರದ ಮೊಹರು ಮಾಡಿ ಅಮಾನತ್ತುಪಡಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ.

7. ಆದರೆ 2 ಕವರ್ ಮತ್ತು ಮಚ್ಚಿನ ಮೇಲೆ ಇರುವ ಚೀಟಿಗಳಲ್ಲಿ ಸಾಕ್ಷಿದಾರರು ತಮ್ಮ ಸಹಿಗಳನ್ನು ಗುರುತಿಸಿದರು.

8. ಈ ಎಲ್ಲಾ ಸಹಿಗಳನ್ನು ನಾನು ಸ್ಥಳದಲ್ಲಿಯೇ ಸಹಿ ಮಾಡಿದಾಗ್ಯೂ ಠಾಣೆಯಲ್ಲಿ ಸಹಿ ಮಾಡಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನ ಅಂದರೆ ಸರಿಯಲ್ಲ.

9. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ವಿ.ಕೆ., ವಕೀಲರಿಂದ 1ನೇ ಆರೋಪಿಯ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.